ಮಾಡಿಯಾನು. ಕಂಪನಿಯ ಪ್ರಾಜೆಕ್ಟ್ ಭರದಿಂದ ನಡೆಯುತ್ತಿರುವ ಸಂದರ್ಭದಲ್ಲಿ ರಜೆ ಹಾಕಿಬಿಟ್ಟರೆ ಮುಗಿದೇ ಹೋಯಿತು. ಮೊದಲೇ ಕಂಡ ಕಂಡವರನ್ನೆಲ್ಲ ಕಾರಣವೂ ಕೊಡದೆ ಕೆಲಸದಿಂದ ತೆಗೆಯುತ್ತಿದ್ದಾರೆ. ಅಂತಹುದರಲ್ಲಿ ತನ್ನಿಂದ ಅಥವಾ ತನ್ನ ಅನುಪಸ್ಥಿತಿಯಲ್ಲಿ ಸಣ್ಣ ತಪ್ಪಾದರೂ ಟೀಮ್ ಮ್ಯಾನೇಜರನಾದ ತನಗೇ ಮೊದಲು ಚೀಟಿ ಸಿಗುವುದು ಎಂಬ ಆತಂಕ ಮಿಹಿರನಿಗಿದ್ದೇ ಇತ್ತು. ಬೇರೆಡೆ ಕೆಲಸ ಸಿಗಲಾರದ್ದೇನೂ ಅಲ್ಲದಿದ್ದರೂ ಇಷ್ಟು ವರ್ಷ ದುಡಿದ ಕಂಪನಿಯಿಂದ ತನ್ನ ಸ್ನೇಹಿತರು, ಜ್ಯೂನಿಯರ್‌ಗಳ ಎದುರು ತಾನು ತಲೆ ತಗ್ಗಿಸಿ ಮನೆಗೆ ಬರುವುದೆಂದರೆ ಅದೆಷ್ಟು ಅವಮಾನ. ಆದರೆ ಮಿಹಿರನಿಗಾಗಲೀ ವರ್ಕ್ ಫ್ರಂ ಹೋಂ ಎನ್ನುತ್ತಾ ಮನೆ ಮಕ್ಕಳು, ಕೆಲಸ ಎಲ್ಲ ನಿಭಾಯಿಸುತ್ತಿದ್ದ ರಾಶಿಗಾಗಲೀ ಹೆಚ್ಚಿನ ಕಷ್ಟಕ್ಕೆ ಅವಕಾಶಕೊಡದಂತೆ ಅವನಪ್ಪ ಚೇತರಿಸಿಕೊಂಡಿದ್ದ.

'ವಯಸ್ಸಾದ ಮೇಲೆ ಒಂದು ಸಣ್ಣ ಕಾಯಿಲೆ ಕಸಾಲೆ ಅಂದ್ರೂ ದಿಗಿಲಾಗತ್ತೆ ಕಣ್ರೀ, ಮಕ್ಕಳಿಗೆಲ್ಲಿ ಭಾರವಾಗಿ ಬಿಡ್ತೇವೋ ಅನಿಸುತ್ತೆ. ಮಕ್ಕಳು ಎಷ್ಟೇ ಒಳ್ಳೆಯವರಾದ್ರೂ ಅವರಿಗೆ ಅವರದ್ದೇ ಆದ ಜವಾಬ್ದಾರಿಗಳು ಇರುತ್ತಲ್ಲ. ಯಾರಿಗೂ ಕಷ್ಟ ಕೊಡದ ಹಾಗೆ ಕೂತಲ್ಲೇ, ಮಲಗಿದಲ್ಲೇ ಪ್ರಾಣಾ ಹೋಗಿಬಿಡಬೇಕು. ಮುಂಚೆಯೆಲ್ಲಾ ಹೆಣ್ಣುಮಕ್ಕಳು ಮುತ್ತೈದೆ ಸಾವು ಕೊಡಪ್ಪಾ ಅಂತಾ ದೇವರನ್ನ ಕೇಳಿಕೊಳ್ತಾ ಇದ್ದರಂತೆ. ಆದರೆ ತಾವು ಹೋದ ಮೇಲೆ ತಮ್ಮ ಗಂಡನ ಗತಿ ಏನು ಅಂತ ಯೋಚನೆ ಅವರಿಗೆಲ್ಲಾ ಬರ್ತಾ ಇರಲಿಲ್ಲವಾ ಅಂತ. ಏನಾದ್ರೂ ಅಂದುಕೊಳ್ಳಿ, ನೀವಿರುವಷ್ಟು ದಿನಾ ನಾನು ನಿಮ್ಮನ್ನ ಚೆನ್ನಾಗಿ ನೋಡಿಕೊಂಡು ಆಮೇಲೆ ನಿಮ್ಮ ಹಿಂದೆ ಬರೋ ಹಾಗೆ ಆಗಲಿ' ಎಂದು ಅಮ್ಮ ಒಂದು ರಾತ್ರಿ ರೂಮಿನಲ್ಲಿ ಅಪ್ಪನ ಜೊತೆ ಮಾತಾಡುತ್ತಿದ್ದುದು ರಾಶಿಯ ಕಿವಿಗೆ ಬಿದ್ದು ಯಥಾವತ್ತಾಗಿ ಮಿಹಿರನನ್ನು ತಲುಪಿತ್ತು. ಮಿಹಿರನಿಗೋ ಆಶ್ಚರ್ಯ. ಸದಾ ಮೌನಿ ಎಂದೇ ತಾನೆಂದುಕೊಳ್ಳುತ್ತಿದ್ದ ಅಮ್ಮ ಇಷ್ಟೆಲ್ಲ ಮಾತಾಡಿದಳೆ? ಅಮ್ಮನ ಯೋಚನೆ ಹೀಗೂ ಹರಿಯುತ್ತಾ ಎಂದು. ಗಂಡ ಹೆಂಡತಿ ಇಬ್ಬರೂ ಪಿಸು ಪಿಸು ಮಾತಾಡಿ ತಲೆಕೆಡಿಸಿಕೊಂಡಿದ್ದರು.

ಆಸ್ಪತ್ರೆಯ ಬಿಲ್ಲು ಸೆಟಲ್ ಮಾಡಲು ಕರೆದಾಗ ಮಿಹಿರ ಎಚ್ಚೆತ್ತ. ನಿನ್ನೆ ಬೆಳಗ್ಗೆ ಐಸಿಯುನಲ್ಲಿದ್ದ ಅಪ್ಪನ ಪರಿಸ್ಥಿತಿ ಗಂಭೀರವಾಗಿದೆ ಎಂದು ಡಾಕ್ಟರ್‌ಗಳ ಓಡಾಟದಲ್ಲೇ ಅವನಿಗೆ ತಿಳಿದು ಹೋಗಿತ್ತು. ಅಪ್ಪನ ಸ್ಥಿತಿ ನೋಡಿದರೆ ಆತ ಉಳಿಯಲಾರ ಎಂದು ಮನಸ್ಸಿಗೆ ಅನಿಸಿಯೂ ಬಿಟ್ಟಿತ್ತು. ಆದರೂ ತಾನು ಪ್ರಯತ್ನ ಮಾಡದಿದ್ದರೆ? ನಾಳೆ ಅಮ್ಮನಿಗೆ ಮುಖ ತೋರಿಸುವುದಾದರೂ ಹೇಗೆ? ಯಾರಿಗೆ ಗೊತ್ತು ಈ ದೊಡ್ಡ ಆಸ್ಪತ್ರೆಯಲ್ಲಿ ತಮ್ಮ ಪಾಲಿಗೆ ಪವಾಡವೂ ನಡೆಯಬಹುದು ಎನಿಸಿ, 'ಐಸಿಯುನಲ್ಲಿ ಯಾಕೆ...' ಎಂದು ರಾಗವೆಳೆದ ಚಿಕ್ಕಪ್ಪನ ಮಾತನ್ನ ನಿರ್ಲಕ್ಷಿಸಿ ಮಿಹಿರ ಡಾಕ್ಟರರ ಮಾತಿಗೆ ತಲೆಯಾಡಿಸಿದ್ದ. ಒಂದೇ ದಿನವಷ್ಟೇ ಮಗನೇ, ನೀನು ಬೆಳಗೆಲ್ಲಾ ದುಡಿದು ರಾತ್ರಿ ನಿದ್ದೆ ಕೆಟ್ಟು ತೊಂದರೆ ತೆಗೆದುಕೊಳ್ಳಬೇಡ ಎಂದು ಹೇಳುವವನಂತೆ ಅಪ್ಪ ಮರುದಿನವೇ ಎಲ್ಲರಿಗೂ ಟಾಟಾ ಎನ್ನುವಂತೆ ಕಂತೆ ಒಗೆದೇ ಬಿಟ್ಟಿದ್ದ. ಪುಣ್ಯಾತ್ಮ ಆಸ್ಪತ್ರೆಯಲ್ಲಿ ತಿಂಗಳುಗಟ್ಟಲೆ ಇದ್ದು ನರಳಿ ಹೋಗುವ ಬದಲು ಯಾರಿಗೂ ತೊಂದರೆ ಕೊಡದೆ ತಾನೂ ಹೆಚ್ಚು ಅನುಭವಿಸದೆ ಸುಖವಾಗಿ ಹೋಗಿಬಿಟ್ಟ ಎಂದು ಚಿಕ್ಕಪ್ಪ ಅಮ್ಮನಿಗೆ ಸಮಾಧಾನ ಹೇಳುತ್ತಿದ್ದುದು ಮಿಹಿರನ ಮಂಜುಗಣ್ಣಿಗೆ ಕಾಣಿಸಿತ್ತು. ಆಗಲೇ ಅಮ್ಮನ ಪ್ರತಿಕ್ರಿಯೆ ಹೇಗಿದೆ ಎಂದು ಅವಳ ಮುಖ ಗಮನಿಸಿದ್ದ. ಇಂದೋ ನಾಳೆಯೋ ಅವರು ಮತ್ತೆ ಎದ್ದು 'ಕಮಲಾ' ಎನ್ನಬಹುದೆ? ಇನ್ನೇನು ಮಾಡಲಾಗದು ಮನೆಗೆ ಕರೆದುಕೊಂಡು ಹೋಗಿ ಎಂದು ಡಾಕ್ಟರು ಕೈ ಚೆಲ್ಲಿದರೆ ಮಾಡುವುದೇನು? ಹಾರ್ಟ್, ಪೆರಾಲಿಸಿಸ್, ಕೋಮಾ... ಎನ್ನುವ ಶಬ್ದಗಳೇ ಧೃತಿಗೆಡಿಸಿರುವಾಗ ಇದು ಮುಗಿಯುವುದಾದರೂ